
# ಮನ್ ಕಿ ಬಾತ್

ಸಂಪುಟ 8



# MANN KI BAAT
## VOL.8

**Authors**
Sarda Mohan and Tanushree Banerji

**Illustrations and Cover Art**
Dilip Kadam

**Assistant Artist**
Ravindra Mokate

**Production**
Amar Chitra Katha

**Colourists**
Prakash Sivan, Prajeesh V. P. and Periasamy Samikannu

**Flat Colourists**
Vineesh S. Sreedharan and Srinath Malolan M.

**Layout Artist**
Akshay Khadilkar

**Published by**
Amar Chitra Katha Pvt. Ltd

KANNADA

ISBN – 978-93-6127-287-5

Amar Chitra Katha Pvt. Ltd, January 2024

© Ministry of Culture, Govt of India, January 2024
All rights reserved. This book is sold subject to the condition that the publication may not be reproduced, stored in a retrieval system (including but not limited to computers, disks, external drives, electronic or digital devices, e-readers, websites), or transmitted in any form or by any means (including but not limited to cyclostyling, photocopying, docutech or other reprographic reproductions, mechanical, recording, electronic, digital versions) without the prior written permission of the publisher, nor be otherwise circulated in any form of binding or cover other than that in which it is published and without a similar condition being imposed on the subsequent purchaser.

You can now get ACK stories as part of your classroom with **ACK Learn**,
a unique learning platform that brings these stories to your school with a range of workshops.
Find out more at **www.acklearn.com** or write to us at **acklearn@ack-media.com**.

ನನ್ನ ಪ್ರೀತಿಯ ಮಕ್ಕಳೇ,

ಭಾರತ ವೈವಿಧ್ಯತೆಯುಳ್ಳ ದೇಶ ಎಂದು ಹೇಳಲಾಗುತ್ತದೆ. ಇದು ಸತ್ಯ. ಭಾರತವು ವಿಭಿನ್ನ ಭಾಷೆಗಳು ಮತ್ತು ಸಂಸ್ಕೃತಿಗಳನ್ನು ಹೊಂದಿರುವ ಜನರಿಂದ ಕೂಡಿದೆ, ಆದರೆ ನಾವೆಲ್ಲರೂ ಪರಸ್ಪರ ಸಂಬಂಧ ಹೊಂದಿದ್ದೇವೆ. ನಮ್ಮ ಮೌಲ್ಯಗಳು, ಆಲೋಚನೆಗಳು ಮತ್ತು ವರ್ತನೆಗಳಿಂದ ನಾವೆಲ್ಲರೂ ಪರಸ್ಪರ ಸಂಪರ್ಕ ಹೊಂದಿದ್ದೇವೆ.

ನೈಸರ್ಗಿಕ ಸಂಪನ್ಮೂಲಗಳು ಎಲ್ಲೆಡೆ ವಿರಳವಾಗುತ್ತಿವೆ ಎಂಬುದು ನಿಮಗೆಲ್ಲರಿಗೂ ತಿಳಿದಿದೆ. ಕಾಡುಗಳು ಕ್ಷೀಣಿಸುತ್ತಿವೆ ಮತ್ತು ನೀರು ಬತ್ತುತ್ತಿದೆ. ಆದರೆ ನಮ್ಮ ದೇಶದಾದ್ಯಂತ 'ಸಮಸ್ಯೆ-ಪರಿಹರಿಸುವ' ಮನೋಭಾವವನ್ನು ಹೊಂದಿರುವ ಜನರಿದ್ದಾರೆ. ಅವರು ಸಮಸ್ಯೆಯನ್ನು ನೋಡುತ್ತಾರೆ, ಪರಿಹಾರದ ಬಗ್ಗೆ ಯೋಚಿಸುತ್ತಾರೆ ಮತ್ತು ನಂತರ ಅದನ್ನು ಸರಿಮಾಡಲು ಸಾಧ್ಯವಿರುವ ಎಲ್ಲವನ್ನೂ ಮಾಡುತ್ತಾರೆ. ಹೀಗೆ ಮಾಡುವ ಮೂಲಕ, ಅವರು ತಮ್ಮ ಸ್ವಂತ ಜೀವನವನ್ನು, ತಮ್ಮ ನೆರೆಹೊರೆಯವರ ಜೀವನವನ್ನು ಮತ್ತು ಪ್ರಾಣಿಪಕ್ಷಿಗಳು ಜೀವನವನ್ನು ಸುಧಾರಿಸಿದ್ದಾರೆ.

ತಾನೊಬ್ಬನೇ ಕಾಡನ್ನು ಸೃಷ್ಟಿಸಿದ ಅಸ್ಸಾಂನ ಜಾದವ್ ಪಾಯೆಂಗ್ ಬಗ್ಗೆ ಹೇಳಲು ನನಗೆ ಹೆಮ್ಮೆಯಾಗುತ್ತಿದೆ. ಈ ಕಾಡನ್ನು ಇಂದು ಹುಲಿ, ಘೇಂಡಾಮೃಗಗಳು ತಮ್ಮ ವಾಸಸ್ಥಾನವಾಗಿಸಿಕೊಂಡಿವೆ.

ಅಸ್ಸಾಂನನಿಂದ ಆರಂಭವಾಗಿ, ಕೇರಳದಲ್ಲಿ ರಫಿ ರಾಮನಾಥ್ ಅವರು ಕಿರು ಅರಣ್ಯವನ್ನು ಸಹ ಸೃಷ್ಟಿಸಿದ್ದಾರೆ. ಒಡಿಶಾದಲ್ಲಿ ಅಮರೇಶ್ ಸಾಮಂತ್, ಕರ್ನಾಟಕದಲ್ಲಿ ಸುರೇಶ್ ಕುಮಾರ್ ಮತ್ತು ಉತ್ತರಾಖಂಡದಲ್ಲಿ ಜಗದೀಶ್ ಕುನಿಯಾಲ್ ಅವರು ಗಿಡಗಳನ್ನು ನೆಟ್ಟು ಸಮಸ್ಯೆಗಳನ್ನು ಪರಿಹರಿಸಿದ್ದಾರೆ.

ಮಿಜೋರಾಂನ ಜನರು ತಮ್ಮ ಪವಿತ್ರ ನದಿಯಾದ ಚಿಟೆ ಲುಯಿಯನ್ನು ಸ್ವಚ್ಛಗೊಳಿಸಿ; ತದನಂತರ, ಅವರು ಅಲ್ಲಿಂದ ತೆಗೆದ ಪ್ಲಾಸ್ಟಿಕ್ಕಿನಿಂದ ರಸ್ತೆಯನ್ನು ನಿರ್ಮಿಸಿದ್ದಾರೆ! ದೇಶದ ಇನ್ನೊಂದು ತುದಿಯಲ್ಲಿ, ತಮಿಳುನಾಡಿನ ಮಹಿಳೆಯರು ಬತ್ತಿಹೋಗಿದ್ದ ನಾಗನದಿಯನ್ನು ಮತ್ತೆ ಜೀವಂತಗೊಳಿಸಿದ್ದಾರೆ.

ಹೀಗಾಗಿ, ನೀವು ಎಲ್ಲಿ ವಾಸಿಸುತ್ತಿದ್ದೀರಿ ಎಂಬುದು ಮುಖ್ಯವಲ್ಲ. 'ಸಮಸ್ಯೆ-ಪರಿಹರಿಸುವ' ಮನೋಭಾವವನ್ನು ನೀವು ಬೆಳೆಸಿಕೊಂಡಲ್ಲಿ, ನೀವು ಎಲ್ಲಿ ಬೇಕಾದರೂ ಬದಲಾವಣೆಗಳನ್ನು ತರಲು ಸಾಧ್ಯ.




# ಪರಿವಿಡಿ


| | | |
|---|---|---|
| 1 | ಅಮರೇಶ್ ಸಾಮಂತ್ | 3 |
| 2 | ಇಂದರ್ ಪಾಲ್ ಸಿಂಗ್ ಬಾತ್ರಾ | 6 |
| 3 | ಜಾದವ್ ಪಾಯೆಂಗ್ | 9 |
| 4 | ಜಗದೀಶ್ ಚಂದ್ರ ಕುನಿಯಾಲ್ | 12 |
| 5 | ರಫಿ ರಾಮನಾಥ್ | 15 |
| 6 | ರಿಪು ದಮನ್ ಬೆವ್ಲಿ | 18 |
| 7 | ನಾಗನದಿ | 21 |
| 8 | ಸಂಗೆ ಶೆರ್ಪಾ | 23 |
| 9 | ಚಿಟೆ ಲುಯಿ ಉಳಿಸಿ | 26 |
| 10 | ಸುರೇಶ್ ಕುಮಾರ್ | 28 |
| 11 | ತುಳಸಿ ರಾಮ್ ಯಾದವ್ | 31 |

# ಅಮರೇಶ್ ಸಾಮಂತ್


ಪರಿಸರವಾದಿಯೊಬ್ಬರು ನಡೆಸುತ್ತಿದ್ದ ಹವಾಮಾನ ಬದಲಾವಣೆ ಕುರಿತು ವಿಶೇಷ ತರಗತಿಯನ್ನು ವಿದ್ಯಾರ್ಥಿಗಳು ಕೇಳುತ್ತಿದ್ದರು.
ಸರ್, ನೀವೊಬ್ಬರೇ ಕಾಡನ್ನು ಸೃಷ್ಟಿಸಿದ್ದು ನಿಜವೇ?
ಇನ್ನೂ ಇಲ್ಲ, ಆದರೆ ನಾನು ಬೇರೆ ಒಂದಷ್ಟು ಜನರೊಂದಿಗೆ ಸೇರಿ ಈ ಕೆಲಸ ಮಾಡುತ್ತಿದ್ದೇನೆ.
ಹೌದಾ, ಏಕೆ ಸರ್? ಇದು ಕೃಷಿಯಂತೇನೂ ಅಲ್ಲವಲ್ಲ. ನಿಮಗೆ ಇದರಿಂದ ಯಾವುದೇ ಆಹಾರ ದೊರೆಯುವುದಿಲ್ಲ.
ಕಾಡುಗಳನ್ನು ನಿರ್ಮಿಸುವುದರಿಂದ ಸಾಕಷ್ಟು ಪ್ರಯೋಜನಗಳಿವೆ. ಮಾಲಿನ್ಯ ಮತ್ತು ಹವಾಮಾನ ಬದಲಾವಣೆಯ ವಿರುದ್ಧ ಹೋರಾಡಲು ಕಾಡು ಸಹಾಯ ಮಾಡುತ್ತದೆ. ಗಾಳಿಯನ್ನು ಸ್ವಚ್ಛಗೊಳಿಸಲು, ಪರಿಸರ ವ್ಯವಸ್ಥೆಗಳನ್ನು ಪುನಃಸ್ಥಾಪಿಸಲು ಮತ್ತು ವಿಪರೀತ ಗಾಳಿ ಮತ್ತು ಪ್ರವಾಹದಿಂದ ಸುತ್ತಮುತ್ತಲಿನ ಪ್ರದೇಶಗಳನ್ನು ರಕ್ಷಿಸಲು ಇದು ಸಹಾಯ ಮಾಡುತ್ತದೆ.
ಹೆಚ್ಚುತ್ತಿರುವ ಮಾಲಿನ್ಯದಿಂದ ಅರಣ್ಯೀಕರಣ ಇಂದಿನ ಅಗತ್ಯವಾಗಿದೆ. ಅದೃಷ್ಟವಶಾತ್, ಕಾಡುಗಳನ್ನು ನಿರ್ಮಿಸುವ ಕೆಲಸ ಮಾಡುವ ಜನರಿದ್ದಾರೆ. ಅಂತಹ ವ್ಯಕ್ತಿಗಳಲ್ಲಿ ಒಬ್ಬರು ಒಡಿಶಾದ ಅಮರೇಶ್ ಸಾಮಂತ್.
ಅವರ ಕಥೆಯನ್ನು ಹೇಳುತ್ತೇನೆ.
ಅಮರೇಶ್ ಸಾಮಂತ್ ಒಡಿಶಾದ ಕರಾವಳಿ ಪ್ರದೇಶದ ಬಿಲ್ವಾಲಿ ಎಂಬ ಹಳ್ಳಿಯಲ್ಲಿ ಹುಟ್ಟಿ ಬೆಳೆದರು.
ನಮ್ಮ ಗ್ರಾಮಕ್ಕೆ ಮತ್ತೊಂದು ಚಂಡಮಾರುತ ಅಪ್ಪಳಿಸಲಿದೆ. ನಮ್ಮ ಮನೆ ಸುರಕ್ಷಿತವಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ.
ಚಂಡಮಾರುತಗಳು ಇಷ್ಟೊಂದು ನಾಶ ಉಂಟುಮಾಡುವುದನ್ನು ತಡೆಯಲು ನಾವು ಏನಾದರೂ ಮಾಡಬೇಕು.
ಅಮರೇಶ್ ಎಲೆಕ್ಟ್ರಿಕಲ್ ಇಂಜಿನಿಯರ್ ಆಗಿದ್ದರೂ ಪ್ರಕೃತಿ ವಿಕೋಪಗಳನ್ನು ತಡೆಯುವ ಚಿಂತನೆ ಸದಾ ಅವರಲ್ಲಿತ್ತು.
ನದಿಯ ದಡದಲ್ಲಿ ಮರಗಳನ್ನು ನೆಡುವುದರಿಂದ ಚಂಡಮಾರುತದ ಪರಿಣಾಮವನ್ನು ಕಡಿಮೆ ಮಾಡಲು ಸಹಾಯವಾಗುತ್ತದೆ ಎಂದು ನಾನು ಓದಿದ್ದೇನೆ. ನೀವು ನನಗೆ ಸಹಾಯ ಮಾಡುವಿರಾ?
ಖಂಡಿತ ಸರ್. ನಮ್ಮೊಂದಿಗೆ ಕೈಜೋಡಿಸುವಂತೆ ನಾವು ಸ್ನೇಹಿತರನ್ನು ಕರೆಯುತ್ತೇವೆ.


ಕೆಲವು ಸ್ವಯಂಸೇವಕರೊಂದಿಗೆ ಸೇರಿ, ಅಮರೇಶ್ 1995 ರಲ್ಲಿ ನದಿಯ ಪಕ್ಕದಲ್ಲಿ ಸಾಲು ಮರಗಳನ್ನು ನೆಡಲು ಪ್ರಾರಂಭಿಸಿದರು.
ಸರೋವರದ ಪಕ್ಕದಲ್ಲಿ, ರಸ್ತೆಗಳ ಎರಡೂ ಬದಿಯಲ್ಲಿ
ಮತ್ತು ಕೆಲವು ಸಾರ್ವಜನಿಕ ಸ್ಥಳಗಳಲ್ಲೂ ಮರ ನೆಡೋಣ.
ವರ್ಷಗಳು ಕಳೆದಂತೆ, ಅಮರೇಶ್ ಮತ್ತು ಅವರ ತಂಡವು ಜಗತ್‌ಸಿಂಗ್‌ಪುರ ಜಿಲ್ಲೆಯಾದ್ಯಂತ ಮರನೆಡುವ ಅನೇಕ ಕಾರ್ಯಕ್ರಮಗಳನ್ನು ನಡೆಸಿತು.
ಆದರೆ ಒಡಿಶಾದಲ್ಲಿ ಚಂಡಮಾರುತ ಅಪ್ಪಳಿಸಿದಾಗ-
ಮನೆ, ಆಸ್ತಿಪಾಸ್ತಿಗೆ ಉಂಟಾದ ಹಾನಿ ಕಡಿಮೆ ಆಗಿಲ್ಲ.
ಮರಗಳು ಉರುಳಿವೆ!
ಅಮರೇಶ್ ಇದಕ್ಕೆ ಪರಿಹಾರ ಹುಡುಕುವ ಸಲುವಾಗಿ ಹಲವು ವರ್ಷಗಳನ್ನು ಕಳೆದರು. 2015 ರಲ್ಲಿ-
ಗ್ರಾಮ್ಯ ಜಂಗಲ್* ಇದಕ್ಕೆ ಉತ್ತರ. ಸೂಕ್ಷ್ಮ ಅರಣ್ಯಗಳನ್ನು ಮಾಡಲು ನಾವು ಮರಗಳನ್ನು ಒಟ್ಟೊಟ್ಟಿಗೆ ಗುಂಪಾಗಿ ನೆಡಬೇಕು. ಇದು ಮಣ್ಣಿನ ಸವೆತವನ್ನು ನಿಯಂತ್ರಿಸುತ್ತದೆ ಮತ್ತು ಚಂಡಮಾರುತ ಮತ್ತು ಪ್ರವಾಹಗಳ ಪ್ರಭಾವವನ್ನು ಕಡಿಮೆ ಮಾಡುತ್ತದೆ.
ಆದರೆ ಹೀಗೆ ಮಾಡಲು ಭೂಮಿ ಎಲ್ಲಿದೆ?
ಅಮರೇಶ್ ಮತ್ತು ಅವರ ತಂಡವು ಸ್ವಲ್ಪ ಭೂಮಿಯನ್ನು ದಾನ ಮಾಡುವಂತೆ ಗ್ರಾಮಸ್ಥರನ್ನು ಕೇಳಲು ಪ್ರಾರಂಭಿಸಿತು.
ನಾವು ಭೂಮಿಯನ್ನು ಏಕೆ ಉಚಿತವಾಗಿ ಕೊಡಬೇಕು?
ನಾವು ಅದೇ ಭೂಮಿಯನ್ನು ಆಹಾರಕ್ಕಾಗಿ ಕೆಲವು ಬೆಳೆಗಳನ್ನು ಬೆಳೆಯಲು ಬಳಸಿಕೊಳ್ಳಬಹುದು.
ಅನೇಕ ಗ್ರಾಮಸ್ಥರು ಇವರ ಮನವಿಯನ್ನು ತಿರಸ್ಕರಿಸಿದರು.


*ಗ್ರಾಮೀಣ ಅರಣ್ಯ.





*ಗ್ರಾಮದ ಮುಖ್ಯಸ್ಥ

ˆಗೌರವದ ಪದ

# ಇಂದರ್‌ಪಾಲ್ ಸಿಂಗ್ ಬಾತ್ರಾ





ನಾಯರ್ ಸರ್ ಮತ್ತು ವಿದ್ಯಾರ್ಥಿಗಳು ನೇಚರ್ ವಾಕ್ ಹೋಗಿದ್ದರು.
ನಾವು ನಡಿಗೆ ಆರಂಭಿಸಿದಾಗಿನಿಂದ ಯಾವುದೇ ವಿಶೇಷ ಪಕ್ಷಿಗಳನ್ನು ನೋಡಿಲ್ಲ.
ನೋಡಿ, ಕೆಲವು ಗುಬ್ಬಚ್ಚಿಗಳು!
ಇದೇನು ವಿಶೇಷ ಹಕ್ಕಿಯಲ್ಲ.
ಗುಬ್ಬಚ್ಚಿ ಈಗ ಅಳಿವಿನಂಚಿನಲ್ಲಿರುವ ಪ್ರಭೇದ ಎಂಬುದು ನಿಮಗೆ ತಿಳಿದಿದೆಯೇ?
ಅಂದರೆ ಅದು ಅಳಿದು ಹೋಗಬಹುದೆ?
ವರ್ಷಗಳು ಕಳೆದಂತೆ ಗುಬ್ಬಚ್ಚಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಅದೃಷ್ಟವಶಾತ್ ಇಂದರ್‌ಪಾಲ್ ಸಿಂಗ್ ಬಾತ್ರಾ ರವರಂತಹ ಕೆಲವು ಜನರು ಅವುಗಳ ಸಂರಕ್ಷಣೆಗಾಗಿ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.
ಇಂದರ್‌ಪಾಲ್ ಸಿಂಗ್ ಬಾತ್ರಾ ವಾರಣಾಸಿಯಲ್ಲಿ ವಾಸಿಸುತ್ತಿದ್ದ ಒಬ್ಬ ಆಹಾರೋದ್ಯಮಿ. ಒಂದು ದಿನ-
ಸೋನಿಯಾ, ನಿನ್ನೆ ಸಂಜೆ ನಾನು ವಾಕಿಂಗ್ ಹೋದಾಗ ಗುಬ್ಬಚ್ಚಿಯನ್ನು ನೋಡಿದೆ. ಗುಬ್ಬಚ್ಚಿ ನೋಡಿ ವರ್ಷಗಳೇ ಕಳೆದಿದ್ದವು.
ನಾನು ಚಿಕ್ಕವನಿದ್ದಾಗ ಅನೇಕ ಗುಬ್ಬಚ್ಚಿಗಳನ್ನು ನೋಡುತ್ತಿದ್ದೆ.
ಎಲ್ಲಾ ಕಡೆ ಎತ್ತರದ ಕಟ್ಟಡಗಳು ಆವರಿಸಿಕೊಂಡಿದ್ದು, ಗುಬ್ಬಚ್ಚಿಗಳಿಗೆ ಗೂಡುಗಳನ್ನು ಕಟ್ಟಲು ಯಾವುದೇ ಮರಗಳಿಲ್ಲ. ಹೀಗಾಗಿ ಅವುಗಳ ಸಂಖ್ಯೆ ವೇಗವಾಗಿ ಕಡಿಮೆಯಾಗುತ್ತಿದೆ.
ನಿಜ, ಆದರೆ ಇದಕ್ಕೆ ನಾವು ಏನು ಮಾಡಬಹುದು?



ಇಂದರ್‌ಪಾಲ್ ಗುಬ್ಬಚ್ಚಿಗಳಿಗೆ ಕಾಳುಗಳನ್ನು ಹಾಕಲು ಪ್ರಾರಂಭಿಸಿದರು. ಸ್ವಲ್ಪವೇ ಸಮಯದಲ್ಲಿ-
ನೋಡು, ಕೆಲವು ಗುಬ್ಬಚ್ಚಿಗಳು ಕಾಳು ತಿನ್ನಲು ಬಂದಿವೆ. ಅವು ಮತ್ತೆ ಮತ್ತೆ ಬರುತ್ತವೆ ಎಂದು ನಾನು ಭಾವಿಸುತ್ತೇನೆ.
ಕೆಲವು ವಾರಗಳ ನಂತರ ಇಂದರ್‌ಪಾಲ್‌ಗೆ ಒಂದು ಉಪಾಯ ಹೊಳೆಯಿತು-
ನಾನು ಈ ಮಡಕೆಗೆ ಒಂದು ರಂಧ್ರವನ್ನು ಮಾಡಿ ಒಣಹುಲ್ಲನ್ನು ತುಂಬಿದ್ದೇನೆ. ನಾನು ಇದನ್ನು ನಮ್ಮ ಮನೆಯ ಹೊರಭಾಗಕ್ಕೆ ಕಟ್ಟುತ್ತೇನೆ. ಗುಬ್ಬಚ್ಚಿಗಳು ಇದನ್ನು ಗೂಡಾಗಿ ಬಳಸುತ್ತವೆ ಎಂದುಕೊಳ್ಳುತ್ತೇನೆ.
ಕೆಲವೇ ದಿನಗಳ ನಂತರ-
ನೋಡಿ, ನಿಮ್ಮ ಉಪಾಯ ಫಲಿಸಿದೆ.
ನನಗೆ ತುಂಬಾ ಸಂತೋಷವಾಗುತ್ತಿದೆ! ನಾನು ಇನ್ನೂ ಹೆಚ್ಚು ಮಡಕೆಗಳನ್ನು ಆರ್ಡರ್ ಮಾಡಲಿದ್ದೇನೆ ಮತ್ತು ಗುಬ್ಬಚ್ಚಿಗಳಿಗೆ ಹೆಚ್ಚಿನ ಗೂಡುಗಳನ್ನು ಮಾಡುತ್ತೇನೆ.
ಇಂದರ್‌ಪಾಲ್ ಅನೇಕ ಮಣ್ಣಿನ ಮಡಕೆ ಗೂಡುಗಳನ್ನು ಮಾಡಿ ತನ್ನ ಮನೆಯ ಒಳಗೆ ಮತ್ತು ಹೊರಗೆ ಇಟ್ಟರು.
ನಮ್ಮ ಮನೆಗೆ ಈಗ ಒಂದು ವಿಶಿಷ್ಟ ನೋಟ ಬಂದಿದೆ!
ಖಂಡಿತ, ನಮ್ಮ ಸುತ್ತಮುತ್ತಲಿನ ಪ್ರದೇಶಗಳು ಗುಬ್ಬಚ್ಚಿಗಳಿಂದ ತುಂಬಿದಾಗ ಇನ್ನೂ ಚಂದವೆನಿಸುತ್ತದೆ.



ಇಂದರ್‌ಪಾಲ್ ನಿಯಮಿತವಾಗಿ ಗುಬ್ಬಚ್ಚಿಗಳಿಗೆ ಆಹಾರ ಮತ್ತು ನೀರನ್ನು ಇಡುತ್ತಿದ್ದರು ಮತ್ತು ವರ್ಷಗಳು ಕಳೆದಂತೆ, ಅನೇಕ ಗುಬ್ಬಚ್ಚಿಗಳು ಅವರ ಮನೆಯನ್ನು ತಮ್ಮದಾಗಿ ಮಾಡಿಕೊಂಡವು.
ಅಪ್ಪಾ, ನೋಡಿ, ಗುಬ್ಬಮ್ಮ ನನ್ನ ಕೈಯಲ್ಲಿ ಕುಳಿತಿದ್ದಾಳೆ.
ಈಗ ತುಂಬಾ ಇವೆ ಅಮೃತಾ. ಇದು ಅದ್ಭುತ ಅಲ್ಲವೇ?
ಹೆಚ್ಚು ಹೆಚ್ಚು ಹಕ್ಕಿಗಳು ಗೂಡುಗಳನ್ನು ನಿರ್ಮಿಸುವುದನ್ನು ಖಚಿತಪಡಿಸಿಕೊಳ್ಳಲು ಇಂದರ್‌ಪಾಲ್ ತನ್ನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮರಗಳನ್ನು ಸಹ ನೆಡಲು ಪ್ರಾರಂಭಿಸಿದರು.
ಅವರು ಇತ್ತೀಚಿನ ವರ್ಷಗಳಲ್ಲಿ ನೂರಾರು ಮರಗಳನ್ನು ನೆಟ್ಟಿದ್ದಾರೆ.
ಇಂದರ್‌ಪಾಲ್ ಅವರ ಮನೆ ಪರಿವರ್ತನೆಗೊಂಡಿದ್ದನ್ನು ನೋಡಿ, ಅವರ ಕೆಲವು ನೆರೆಹೊರೆಯವರು ಸ್ಫೂರ್ತಿಗೊಂಡರು.
ಇಂದರ್‌ಪಾಲ್, ನೀವು ಮಾಡುತ್ತಿರುವ ಕೆಲಸ ಅದ್ಭುತವಾಗಿದೆ. ಪಕ್ಷಿಗಳ ಸಂಖ್ಯೆ ಹೆಚ್ಚಾಗಿದೆ!
ನಾವು ಕೂಡ ಗುಬ್ಬಚ್ಚಿಗಳನ್ನು ರಕ್ಷಿಸಲು ಸಹಾಯ ಮಾಡಲು ಬಯಸುತ್ತೇವೆ.
ಪಕ್ಷಿಗಳಿಗೆ ಆಹಾರ ಮತ್ತು ನೀರನ್ನು ನಿಯಮಿತವಾಗಿ ಇಡಿ. ಅವು ಖಂಡಿತವಾಗಿಯೂ ನಿಮ್ಮ ಮನೆಗಳ ಸುತ್ತಲೂ ಇರುತ್ತವೆ.
ಇಂದರ್‌ಪಾಲ್ 15 ವರ್ಷಗಳಿಂದ ಗುಬ್ಬಚ್ಚಿಗಳಿಗೆ ಆಹಾರ ನೀಡುತ್ತಿದ್ದಾರೆ. ಇಂದು, ಅವರ ಮನೆಯಲ್ಲಿ 100 ಕ್ಕೂ ಹೆಚ್ಚು ಗೂಡುಗಳಿವೆ ಮತ್ತು ಸುಮಾರು 2,500 ಗುಬ್ಬಚ್ಚಿಗಳು ವಾಸಿಸುತ್ತಿವೆ.
ಗುಬ್ಬಚ್ಚಿಗಳನ್ನು ಸಂರಕ್ಷಿಸುವ ಇಂದರ್‌ಪಾಲ್ ಅವರ ಕೆಲಸವು ಅನೇಕರಿಗೆ ಸ್ಫೂರ್ತಿ ನೀಡಿದೆ. ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ಇವರ ಪ್ರಯತ್ನಕ್ಕೆ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಪ್ರಶಂಸಿದ್ದಾರೆ.


# ಜಾದವ್ ಪಾಯೆಂಗ್


ಶಾಲೆಯ ಉದ್ಯಾನದಲ್ಲಿ -
ಅಯ್ಯೋ! ನಾವು ನೆಟ್ಟಿದ್ದ ಹೊಸ ಗಿಡಗಳೆಲ್ಲ ಒಣಗಿ ಹೋಗಿವೆ.
ರಜಾದಿನಗಳಿಗಿಂತ ಮೊದಲು, ಒಂದು ವಾರದ ಹಿಂದೆ ಅವು ಚೆನ್ನಾಗಿದ್ದವು.
ನಿಜ, ಕೇವಲ ಗಿಡ ನೆಟ್ಟರೆ ಸಾಲದು. ನೀವೂ ಅವುಗಳ ಬಗ್ಗೆ ಕಾಳಜಿ ವಹಿಸಬೇಕು. ಅಸ್ಸಾಂನ ಜಾದವ್ ಪಾಯೆಂಗ್ ಅವರು ಮಾಡಿದ್ದು ಇದನ್ನೇ. ಅವರು ಇಡೀ ಅರಣ್ಯವನ್ನು ಏಕಾಂಗಿಯಾಗಿ ಬೆಳೆಸಿದರು, ಅದು ಕೂಡ ಮರಳುಕಟ್ಟೆಯ ಮೇಲೆ!
ಮೈಸಿಂಗ್ ಬುಡಕಟ್ಟು ಜನಾಂಗಕ್ಕೆ ಸೇರಿರುವ ಜಾದವ್ ಮೊಲಾಯ್ ಪಾಯೆಂಗ್, ವಿಶ್ವದ ಅತಿದೊಡ್ಡ ನದಿ ದ್ವೀಪಗಳಲ್ಲಿ ಒಂದಾಗಿರುವ ಮಜೌಲಿಯಲ್ಲಿ ವಾಸಿಸುತ್ತಿದ್ದಾರೆ.
1979 ರ ಉರಿಬಿಸಿಲಿನ ಮಧ್ಯಾಹ್ನದ ಹೊತ್ತಿನಲ್ಲಿ, 16 ವರ್ಷ ವಯಸ್ಸಿನವರಾಗಿದ್ದ ಜಾದವ್ ಜೀವನವನ್ನು ಶಾಶ್ವತವಾಗಿ ಬದಲಾಯಿಸುವಂತಹ ಘಟನೆಯೊಂದು ನಡೆಯುತ್ತದೆ.
ಎಷ್ಟೊಂದು ಹಾವುಗಳು! ಎಲ್ಲವೂ ಸತ್ತಿವೆ!
ಮರಳು ತುಂಬಾ ಬಿಸಿಯಾಗಿ, ಅವುಗಳಿಗೆ ನೆರಳಿನ ಆಸರೆಯೇ ಇಲ್ಲದೆ ಹೀಗಾಗಿರಬೇಕು.



ಬಿಸಿಲಿನ ತಾಪಕ್ಕೆ ನಾವೂ ಮುಂದೊಂದು ದಿನ ಹೀಗೆ ಸಾಯುತ್ತೇವೆಯೇ?
ಅದನ್ನು ನಿಲ್ಲಿಸಲು ನಾನು ಏನಾದರೂ ಮಾಡಬೇಕು.
ಜಾದವ್ ಮರುದಿನ ಮರಳು ಕಟ್ಟೆಯ ಮೇಲೆ ಕೆಲವು ಬಿದಿರು ಸಸಿಗಳನ್ನು ನೆಟ್ಟರು...
ಉಫ್! ಬಿಸಿಲು ತುಂಬಾ ಸುಡುತ್ತಿದೆ.
...ಮತ್ತು ನಂತರ.
ಇದು ಕಷ್ಟದ ಕೆಲಸವಾಗಿತ್ತು, ಆದರೆ ಅವರು ತನ್ನ ಕೆಲಸ ಮುಂದುವರಿಸಿದರು.
ನಂತರ ಇವರು ಬೇರೆ ಬೇರೆ ವಿಧದ ಮರಗಳನ್ನು ನೆಡಲು ಪ್ರಾರಂಭಿಸಿದರು. ಹಿಂದೆ ಮರಳು ಮಾತ್ರ ಇದ್ದ ಜಾಗದಲ್ಲಿ...
ದಿನಕ್ಕೊಂದು ಮರದಂತೆ ಪ್ರತಿದಿನ ನೆಡಲಾಗುತ್ತಿತ್ತು.


40 ವರ್ಷಗಳ ನಂತರ, ಮರಳುಕಟ್ಟೆಗೆ ಮೊಲಾಯಿಯವರ ಹೆಸರಿಗೆ ಗೌರವಾರ್ಥವಾಗಿ ಮೊಲಾಯ್ ಅರಣ್ಯ ಎಂದು ಹೆಸರಿಸಲಾಯಿತು. ಆನೆ, ಹುಲಿ, ಘೇಂಡಾಮೃಗ ಹೀಗೆ ನಾನಾ ಬಗೆಯ ಪಕ್ಷಿಗಳು ಇಲ್ಲಿ ವಾಸಿಸುತ್ತಿವೆ.


ಜಾದವ್ ಅವರ ಜೀವನದ ಕುರಿತು ಪುಸ್ತಕಗಳು, ಚಲನಚಿತ್ರಗಳು ಮತ್ತು ಸಾಕ್ಷ್ಯ ಚಿತ್ರಗಳಿವೆ. 'ದಿ ಫಾರೆಸ್ಟ್ ಮ್ಯಾನ್ ಆಫ್ ಇಂಡಿಯಾ' ಎಂದು ಕರೆಯಲಾಗುವ ಜಾದವ್ ಅವರಿಗೆ 2015 ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಲಾಯಿತು.


ಈಗಲೂ ಜಾದವ್ ಪ್ರತಿದಿನ ಬೆಳಿಗ್ಗೆ 4.30 ಕ್ಕೆ ಎದ್ದು ಕಾಡಿನ ಬಗ್ಗೆ ಕಾಳಜಿ ವಹಿಸಲು ಅಲ್ಲಿಗೆ ಹೋಗುತ್ತಾರೆ.
ಈ ಕಾಡನ್ನು ನಾನೊಬ್ಬನೇ ಸೃಷ್ಟಿಸಿಲ್ಲ. ನಾನು ಮರಗಳನ್ನಷ್ಟೆ ನೆಟ್ಟಿದ್ದೇನೆ. ಒಮ್ಮೆ ಮರಗಳಿಂದ ಬೀಜ ಉದುರಿದರೆ, ಗಾಳಿಗೆ ಅವುಗಳನ್ನು ನೆಡುವುದು ಹೇಗೆ ಎಂದು ತಿಳಿದಿರುತ್ತದೆ, ಪಕ್ಷಿಗಳಿಗೆ ಬಿತ್ತುವುದು ಹೇಗೆ ಎಂದು ತಿಳಿದಿರುತ್ತದೆ, ಪ್ರಾಣಿಗಳಿಗೂ ತಿಳಿದಿರುತ್ತದೆ, ಬ್ರಹ್ಮಪುತ್ರ ನದಿಗೂ ತಿಳಿದಿರುತ್ತದೆ. ಇಡೀ ಪರಿಸರ ವ್ಯವಸ್ಥೆಗೇ ತಿಳಿದಿರುತ್ತದೆ.
ಜಾದವ್ ನಿಸರ್ಗದ ಭಾಷೆಯನ್ನು ಅರ್ಥಮಾಡಿಕೊಂಡಿದ್ದಾರೆ ಮತ್ತು ಅದರೊಂದಿಗೆ ಅವರು ಒಂದಾಗಿದ್ದಾರೆ.

# ಜಗದೀಶ್ ಚಂದ್ರ ಕುನಿಯಾಲ್





*ಬೆಟ್ಟದ ಝರಿ


ˆ1970 ರ ದಶಕದಲ್ಲಿ ನಡೆದ ಪರಿಸರ ಚಳುವಳಿಯಲ್ಲಿ ಮರಗಳನ್ನು ಕತ್ತರಿಸದಂತೆ ತಡೆಯಲು ಜನರು ಮರಗಳನ್ನು ತಬ್ಬಿಕೊಂಡರು





*ಹಿಂದಿ ಭಾಷೆಯಲ್ಲಿ ಚಿಕ್ಕಪ್ಪ ಯಾ ದೊಡ್ಡಪ್ಪ



ಅದೇ ವರ್ಷ, ಸರ್ಕಾರವು ಗುಡ್ಡಗಾಡು ಪ್ರದೇಶಗಳಲ್ಲಿ ಚಹಾ ತೋಟಗಳನ್ನು ಮಾಡುವ ಯೋಜನೆಯನ್ನು ಪ್ರಾರಂಭಿಸಿತು.
ಉತ್ತರಾಖಂಡ ರಾಜ್ಯ ಸರ್ಕಾರವು ಬೆಟ್ಟದ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಚಹಾ ಕೃಷಿಯನ್ನು ಪ್ರೋತ್ಸಾಹಿಸುತ್ತದೆ.
ನಾನು ಚಹಾ ತೋಟ ಮಾಡಲಿದ್ದೇನೆ. ನಾನು ಚಹಾ ಗಿಡ ನೆಟ್ಟು ಪೋಷಿಸುತ್ತಿದ್ದರೆ, ಗಿಡ ಮರಗಳು ಚೆನ್ನಾಗಿ ಬೆಳೆಯುತ್ತವೆ.
ಜಗದೀಶ್ ತನ್ನ ಪ್ರಯತ್ನವನ್ನು ಮುಂದುವರೆಸಿದರು ಮತ್ತು ಅರಣ್ಯ ಪ್ರದೇಶವು ಹೆಚ್ಚಾಯಿತು.
ಅಂತಿಮವಾಗಿ, 2012 ರಲ್ಲಿ-
ಗಧೇರಾದಲ್ಲಿ ನೀರು ಹರಿಯಲಾರಂಭಿಸಿತು! ನಂಬುವುದಿಲ್ಲ ಅಲ್ಲವೇ, ಬಂದು ನೋಡಿ.
ನಾನು ಈ ದಿನಕ್ಕೊಸ್ಕರ ತುಂಬಾ ಕಾಯುತ್ತಿದ್ದೆ!
ನಿನ್ನ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಿದೆ ಮಗನೇ! ನಾವು ನಿನ್ನನ್ನು ನಂಬದಿರುವುದು ನಾಚಿಕೆಗೇಡಿನ ಸಂಗತಿ.
ನಮ್ಮ ಭವಿಷ್ಯ ಸುರಕ್ಷಿತವಾಯಿತು. ಈ ಸಂತೋಷವು ಹಣದಿಂದ ಖರೀದಿಸಬಹುದಾದ ಎಲ್ಲಕ್ಕಿಂತ ಹೆಚ್ಚು ಮೌಲ್ಯಯುತವಾಗಿದೆ.
ಜಗದೀಶ್ ಅವರ ಯಶಸ್ಸಿಗೆ ಇಡೀ ಸಿರ್ಕೋಟ್ ಗ್ರಾಮವೇ ಸಂಭ್ರಮಿಸಿತು.
ಗ್ರಾಮದಲ್ಲಿ 150 ಕ್ಕೂ ಹೆಚ್ಚು ಕುಟುಂಬಗಳು ನೀರಿಗಾಗಿ ಈ ಗಧೇರಾವನ್ನು ಅವಲಂಬಿಸಿವೆ ಮತ್ತು ನೀವು ಅವರ ಜೀವನವನ್ನು ಬದಲಾಯಿಸಿದ್ದೀರಿ. ಛಲಬಿಡದೆ ಹೋರಾಡಿದ್ದಕ್ಕೆ ಧನ್ಯವಾದಗಳು.
ಈಗ, ಈ ಗಧೆರಾವನ್ನು ತುಂಬಿಸಲು, ನಾವು ಹೆಚ್ಚು ಮರಗಳನ್ನು ನೆಡಬೇಕು.
30 ವರ್ಷಗಳಲ್ಲಿ ಜಗದೀಶ್ ಅವರು ತಮ್ಮ ಗ್ರಾಮದಲ್ಲಿ 15,000 ಮರಗಳನ್ನು ನೆಟ್ಟರು. ಅಂತಿಮವಾಗಿ-
ನಾವು ಅಕ್ಕಪಕ್ಕದ ಹಳ್ಳಿಯವರಾಗಿದ್ದು, ನಾವು ಕೂಡ ನಮ್ಮ ನೀರಿನ ಮೂಲಗಳಿಗೆ ಮತ್ತೆ ಜೀವ ತುಂಬಲು ಬಯಸುತ್ತೇವೆ. ನಾವು ಈ ಕೆಲಸವನ್ನು ಹೇಗೆ ಪ್ರಾರಂಭಿಸುವುದು?
ಈ ಕೆಲಸವನ್ನು ಸಸಿ ನೆಡುವುದರಿಂದ ಆರಂಭಿಸಿ ಮತ್ತು ಕತ್ತರಿಸಿದ ಪ್ರತಿ ಮರಕ್ಕೆ ಐದು ಗಿಡಗಳನ್ನು ನೆಡಲು ಮರೆಯದಿರಿ.


# ರಫಿ ರಾಮನಾಥ್






*ಕೇರಳದ ಅಲಪುಝದಲ್ಲಿ


ಕೆಲವು ವಾರಗಳ ನಂತರ -
ಶಾಲೆ ನೀಡಿರುವ ಈ ಜಾಗದಲ್ಲಿ ಗಿಡಮೂಲಿಕೆ ಉದ್ಯಾನ ಆರಂಭಿಸೋಣ. ನಾವು ಇಲ್ಲಿ ಬೇವು, ಅಶೋಕ ಮುಂತಾದ ಮರಗಳನ್ನು ನೆಡೋಣ.
ಉದ್ಯಾನವನ್ನು ಆರಂಭಿಸಲು ರಫಿಯವರು ಅರಣ್ಯ ಇಲಾಖೆಯಿಂದ ಸಸಿಗಳನ್ನು ತಂದರು.


ವರ್ಷಗಳು ಉರುಳಿದಂತೆ, ರಫಿ ಮತ್ತು ಅವರ ವಿದ್ಯಾರ್ಥಿಗಳು ಅನೇಕ ವಿಧದ ಔಷಧೀಯ ಸಸ್ಯಗಳನ್ನು ನೆಟ್ಟರು.
ಮುಂದಿನ ವರ್ಷ ನಾವು ಪಾಸಾಗಿ ಹೋದಾಗ ಈ ಗಿಡಗಳನ್ನು ಯಾರು ಪೋಷಿಸುತ್ತಾರೆ?
ಮುಂದಿನ ಬ್ಯಾಚ್ ವಿದ್ಯಾರ್ಥಿಗಳು ಈ ಉದ್ಯಾನವನ್ನು ನೋಡಿಕೊಳ್ಳುತ್ತಾರೆ.
ಈ ಗಿಡಮೂಲಿಕೆ ಉದ್ಯಾನದಲ್ಲಿ 150ಕ್ಕೂ ಹೆಚ್ಚು ಬಗೆಯ ಗಿಡಗಳಿದ್ದು, 13 ವರ್ಷಗಳಿಂದ ವಿದ್ಯಾರ್ಥಿಗಳು ಇವುಗಳ ಆರೈಕೆ ಮಾಡುತ್ತಾ ಬಂದಿದ್ದಾರೆ.


ಗಿಡಮೂಲಿಕೆ ಉದ್ಯಾನ ಯಶಸ್ವಿಯಾಗಿದೆ. ಈಗ ನಾನು ಪರಿಸರ ಸಂರಕ್ಷಣೆಗೆ ಹೆಚ್ಚಿನ ಸಮಯ ಮತ್ತು ಶಕ್ತಿಯನ್ನು ವಿನಿಯೋಗಿಸಬೇಕಿದೆ.



ಸ್ವಲ್ಪ ಸಮಯದಲ್ಲೇ ರಫಿ ಎನ್‌ಜಿಒ ಸಹಯೋಗದೊಂದಿಗೆ ಜಿಲ್ಲೆಯಾದ್ಯಂತ ಮರಗಳ ತೋಪುಗಳ ಅಭಿಯಾನ ಪ್ರಾರಂಭಿಸಿದರು.
ನಮ್ಮ ಮುಂದಿನ ಅಭಿಯಾನದಲ್ಲಿ ನಮ್ಮೊಂದಿಗೆ ದಯವಿಟ್ಟು ನಿಮ್ಮ ಸ್ನೇಹಿತರು ಮತ್ತು ಕುಟುಂಬ ಕೈಜೋಡಿಸುವಂತೆ ತಿಳಿಸಿ. ತಮ್ಮ ಮನೆಯ ಬಳಿ ಗಿಡ ನೆಡಲು ಇಚ್ಛಿಸುವವರಿಗೂ ನಾವು ಗಿಡಗಳನ್ನು ನೀಡುತ್ತಿದ್ದೇವೆ.
ಹಲವು ವರ್ಷಗಳಿಂದ ರಫಿಯವರು ಒಂದು ಲಕ್ಷ ಗಿಡಗಳನ್ನು ನೆಟ್ಟು ಎರಡು ಲಕ್ಷಕ್ಕೂ ಹೆಚ್ಚು ಸಸಿಗಳನ್ನು ವಿತರಿಸಿದ್ದಾರೆ.




*2168 ಚದರ ಅಡಿ

ˆಜ್ಞಾನದ ಅರಣ್ಯ

# ರಿಪು ದಮನ್ ಬೆವ್ಲಿ




ದೆಹಲಿಯಲ್ಲಿ ಮಾಲಿನ್ಯವು ಭಯವೆನಿಸುವ ಮಟ್ಟವನ್ನು ಮುಟ್ಟಿದೆ. ನೀವು ಶಾಲೆಗೆ ಬರುವಾಗ ಮಾಸ್ಕ್ ಧರಿಸುತ್ತಿದ್ದೀರಿ ಎಂದು ನಾನು ಭಾವಿಸುತ್ತೇನೆ.
ಹೌದು ಸರ್. ಇದು ಬಹಳ ಹದಗೆಡುತ್ತಿದೆ!
ಇದು ಮಾಲಿನ್ಯದ ವಿರುದ್ಧ ವಿಶಿಷ್ಟ ರೀತಿಯಲ್ಲಿ ಹೋರಾಡಿದ ರಿಪು ದಮನ್ ಬೆವ್ಲಿಯನ್ನು ನೆನಪಿಸುತ್ತದೆ.
ರಿಪು ದಮನ್ ಬೆವ್ಲಿ ತನ್ನ ತಾಯಿ ರಣಬೀರ್ ಕೌರ್ ಮತ್ತು ತಂಗಿ ಜಾಸ್ಮಿನ್ ಅವರೊಂದಿಗೆ ದೆಹಲಿಯಲ್ಲಿ ಬೆಳೆದರು.
ರಿಪು ಆರು ವರ್ಷದವನಿದ್ದಾಗಲೆ ಮಲ್ಲಿಗೆ ಗಿಡವನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದನು.
ರಿಪು, ಕ್ರೀಡೆಯಲ್ಲಿ, ಅದರಲ್ಲೂ ವಿಶೇಷವಾಗಿ ಕ್ರಿಕೆಟಿನಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿದ್ದುದನ್ನು ರಣಬೀರ್ ಗಮನಿಸಿದ್ದರು.
ಮುಂದಿನ ಕೆಲವು ವರ್ಷಗಳಲ್ಲಿ, ರಿಪು ರಾಜ್ಯ ಮಟ್ಟದಲ್ಲಿ ಕ್ರಿಕೆಟ್ ಆಡಲು ಹೋಗುತ್ತಾನೆ.
ನಾನು ನನ್ನ ಆಟವನ್ನು ಸುಧಾರಿಸಿಕೊಳ್ಳಬೇಕು. ಮುಂದೊಂದು ದಿನ ನಾನು ಭಾರತ ದೇಶವನ್ನು ಪ್ರತಿನಿಧಿಸಬೇಕೆಂಬ ಆಸೆ ಇದೆ.




*ಸೈನಸ್‌ಗಳನ್ನು ಒಳಗೊಳ್ಳುವ ಅಂಗಾಂಶದ ಉರಿಯೂತ
^ಪ್ಲಾಗಿಂಗ್ ಚಳುವಳಿಯ ಸ್ಥಾಪಕ


** ಸ್ವೀಡಿಷ್ ಭಾಷೆಯ 'ಪ್ಲಾಕಾ ಅಪ್' ಅಂದರೆ 'ಪಿಕ್ ಅಪ್' ಮತ್ತು 'ಜಾಗಿಂಗ್'- ಈ ಎರಡು ಪದಗಳ ಸಂಯೋಜನೆಯೇ ಪ್ಲಾಗಿಂಗ್




*ಕಸ ಹಾಕುವ ಜನರು
^ಸ್ವಚ್ಛಗೊಳಿಸುವ ಜನರು


**ಉಪವಾಸ
^^ಪ್ರಯಾಣ

# ನಾಗನದಿ




*ತಮಿಳುನಾಡಿನ ವೆಲ್ಲೂರು ಜಿಲ್ಲೆಯ ಒಂದು ಹಳ್ಳಿ

^ಸಾಂಪ್ರದಾಯಿಕ ಮರುಪೂರಣ ಬಾವಿಗಳು



ಯಾವುದೇ ಗ್ರಾಮಸ್ಥರು ಮುಂದೆ ಬರದಿದ್ದಾಗ, ಫೌಂಡೇಶನ್ ಮೊದಲ ಐದು ಮರುಪೂರಣ ಬಾವಿಗಳನ್ನು ಅಗೆಯಲು ಚೆನ್ನೈನಿಂದ ಸ್ವಯಂಸೇವಕರನ್ನು ಕರೆತಂದಿತು. ಎರಡು ತಿಂಗಳ ನಂತರ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದರು.
ಇದು ಹತ್ತು ವರ್ಷಗಳಲ್ಲೇ ಅತ್ಯಧಿಕ ನೀರಿನ ಮಟ್ಟವಾಗಿದೆ. ನಾವು ಗ್ರಾಮಸ್ಥರಿಗೆ ಉದ್ಯೋಗ ನೀಡಿ ಅವರಿಗೆ ತರಬೇತಿ ನೀಡಿದರೆ, ನಾವು ಈ ಕೆಲಸವನ್ನು ಇತರ ಹಳ್ಳಿಗಳಿಗೂ ವಿಸ್ತರಿಸಬಹುದು.
ಇದು ಬಹಳ ಭರವಸೆದಾಯಕವಾಗಿದೆ. ನಾವು ನಿಮಗೆ ಸರ್ಕಾರದ ಸಂಪೂರ್ಣ ಬೆಂಬಲವನ್ನು ನೀಡುತ್ತೇವೆ.
ಶೀಘ್ರದಲ್ಲೇ -
ಅಕ್ಕಾ*, ನಾವು ನದಿಯನ್ನು ಉಳಿಸಲು ಸಿದ್ಧರಿದ್ದೇವೆ.
ಅದ್ಭುತ! ಕುಟುಂಬದ ಒಬ್ಬ ಸದಸ್ಯನಿಗೆ 100 ದಿನಗಳ ಉದ್ಯೋಗದ ಭರವಸೆ ನೀಡುತ್ತೇವೆ. ಮರುಪೂರಣ ಬಾವಿಗಳನ್ನು ನಿರ್ಮಿಸಲು ನಾವು 15 ದಿನಗಳ ತರಬೇತಿಯನ್ನು ಸಹ ನೀಡುತ್ತೇವೆ.
20 ಮಹಿಳೆಯರು ಮರುಪೂರಣ ಬಾವಿಗಳನ್ನು ಅಗೆಯಲು ಪ್ರಾರಂಭಿಸಿದರು ಮತ್ತು ಮಳೆ ನೀರು ಅವುಗಳಿಗೆ ಹರಿಯಲಾರಂಭಿಸಿತು.
ಸ್ವಲ್ಪ ಸಮಯದಲ್ಲೇ, ಮಹಿಳೆಯರು ಬಾವಿಗಳಿಗೆ ಸಿಮೆಂಟ್ ರಿಂಗುಗಳನ್ನು ನಿರ್ಮಿಸುವುದನ್ನು ಸಹ ಕಲಿತರು ಮತ್ತು ಹೆಚ್ಚುವರಿ ಆದಾಯವನ್ನು ಗಳಿಸಲು ಆರಂಭಿಸಿದರು.
ಪುರುಷರು ಚೆನ್ನಾಗಿ ಕೆಲಸ ಮಾಡುತ್ತೇವೆ. ಅದನ್ನು ನಮಗೆ ಬಿಟ್ಟುಬಿಡಿ.
ಹೌದಾ? ಇಷ್ಟು ವರ್ಷ ಎಲ್ಲಿದ್ದಿರಿ? ಈ ಪ್ರದೇಶವು ಮರುಭೂಮಿಯಾಗಲು ಕಾಯುತ್ತಿದ್ದಿರಾ?
ಇದರ ಸುದ್ದಿ ಎಲ್ಲೆಡೆ ಹರಡಿತು ಮತ್ತು 2016 ರಷ್ಟರಲ್ಲಿ, 1,200 ಜನರು, ಹೆಚ್ಚಾಗಿ ಮಹಿಳೆಯರು, ಈ ಪ್ರದೇಶದಲ್ಲಿ 354 ಮರುಪೂರಣ ಬಾವಿಗಳನ್ನು ನಿರ್ಮಿಸಿದರು.
ಮುಂದಿನ ಮೂರು ವರ್ಷಗಳಲ್ಲಿ, ವೆಲ್ಲೂರು ಜಿಲ್ಲೆಯಾದ್ಯಂತ 3,700 ಮರುಪೂರಣ ಬಾವಿಗಳು ಮತ್ತು ಬೌಲ್ಡರ್ ಚೆಕ್ ಡ್ಯಾಂಗಳನ್ನು ನಿರ್ಮಿಸಲು 20,000 ಕ್ಕೂ ಹೆಚ್ಚು ಮಹಿಳೆಯರು ಒಟ್ಟಾಗಿ ಕೆಲಸ ಮಾಡಿದರು.
ಮಳೆಗಾಲದಲ್ಲಿ ನದಿ ಚೆನ್ನಾಗಿ ಹರಿಯುತ್ತದೆ.
ಹೌದು. ನದಿಯ ದಡದಲ್ಲಿ ಹೆಚ್ಚು ಹಸಿರು ಇದೆ. ನಾವು ನಮ್ಮ ನದಿ ಮತ್ತು ನಮ್ಮ ಹಳ್ಳಿಗಳನ್ನು ಪುನಃಸ್ಥಾಪಿಸುತ್ತಿದ್ದೇವೆ.
ಈ ಯೋಜನೆಯಿಂದ ನಾಗನದಿಯು 400ಕ್ಕೂ ಹೆಚ್ಚು ಹಳ್ಳಿಗಳಿಗೆ ನೀರು ನೀಡಿದೆ. 2019 ರಷ್ಟರಲ್ಲಿ-
ಈ ಹಿಂದೆ ನಾವು ಮುಂಗಾರು ಮಳೆಯಲ್ಲಿ ಒಂದು ಬೆಳೆಯನ್ನು ಮಾತ್ರ ಬೆಳೆಯಬಹುದಿತ್ತು. ಈಗ ಹಿಂಗಾರು ಹಂಗಾಮಿನಲ್ಲೂ ಬೆಳೆ ಬೆಳೆಯುತ್ತಿದ್ದೇವೆ.
ಈ ನದಿ ನಿಜವಾಗಿಯೂ ನಮ್ಮ ಜೀವನವನ್ನು ಬದಲಾಯಿಸಿದೆ.


*ತಮಿಳಿನಲ್ಲಿ ಸಹೋದರಿ.

# ಸಂಗೆ ಶೆರ್ಪಾ





*ಸಿಕ್ಕಿಂನ ಒಂದು ಹಳ್ಳಿ

^ತ್ಸೋ ಎಂದರೆ 'ಸರೋವರ', ಮ್ಗೊ ಎಂದರೆ 'ತಲೆ'





*ಸಿಕ್ಕಿಂನ ರಾಜಧಾನಿ
^ಸಿಕ್ಕಿಂ ಮತ್ತು ಟಿಬೆಟ್ ನಡುವಿನ ಪರ್ವತ ಮಾರ್ಗ

** ತ್ಸೋಮ್ಗೊ ಸರೋವರ ಸಂರಕ್ಷಣಾ ಸಮಿತಿ
^^ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್



ಇವರು ಸರ್ಕಾರ ಮತ್ತು ಸ್ಥಳೀಯರ ನಡುವೆ ಸಂಪರ್ಕ ಸೇತುವೆಯಾದರು ಮತ್ತು ಟಿಪಿಎಸ್‌ಎಸ್ ಗಾಗಿ ಬದಲಾವಣೆ ನಿರ್ವಹಣಾ ಕಾರ್ಯಕ್ರಮಗಳನ್ನು ಚಾಲನೆ ಮಾಡಲು ಪ್ರಾರಂಭಿಸಿದರು.
ಫಾಸ್ಟ್ ಫುಡ್ ಮಳಿಗೆಗಳು ಮಾಲಿನ್ಯದ ಮುಖ್ಯ ಮೂಲವಾಗಿದೆ. ಅವು ಜೌಗು ಪ್ರದೇಶದ ಸಮೀಪದಲ್ಲಿವೆ. ನಾವು ಅವುಗಳನ್ನು ದೂರಕ್ಕೆ ಸ್ಥಳಾಂತರಿಸಬಹುದು.
ನಾವು ಪ್ರವಾಸಿಗರಿಗೆ ಪ್ಲಾಸ್ಟಿಕ್ ಚೀಲಗಳ ಬದಲಿಗೆ ಬಟ್ಟೆ ಚೀಲಗಳನ್ನು ನೀಡಬಹುದು.
ಸಂಕೀರ್ಣವನ್ನು ತ್ಸೋಮ್ಗೊ ಕೆಳಕ್ಕೆ 100 ಮೀ ದೂರಕ್ಕೆ ಸ್ಥಳಕ್ಕೆ ಸ್ಥಳಾಂತರಿಸಲಾಯಿತು, ಇದರಿಂದ ಒಳಚರಂಡಿಯ ನೀರುವ ಸರೋವರಕ್ಕೆ ಸೇರುವುದು ನಿಂತಿತು.
ಟಿಪಿಎಸ್‌ಎಸ್ ಮೂಲಕ, ಸಂಗೆ ಮತ್ತು ಅವರ ಸ್ನೇಹಿತರು ಅನೇಕ ಮಹತ್ವದ ಬದಲಾವಣೆಗಳನ್ನು ಮಾಡಿದರು.
ಕಪ್ ನೂಡಲ್ ಬಾಕ್ಸುಗಳು ಇಲ್ಲಿ ಅತಿ ಹೆಚ್ಚು ಕಸದ ಮೂಲಗಳಾಗಿವೆ. ಇವುಗಳ ಮಾರಾಟವನ್ನು ನಿಲ್ಲಿಸೋಣ.
ಮತ್ತು ನಮಗೆ ಸರೋವರದ ಸುತ್ತಲೂ ಇನ್ನೂ ಅನೇಕ ಕಸದ ತೊಟ್ಟಿಗಳ ಅಗತ್ಯವಿದೆ.
ಸರೋವರದ ಸುತ್ತಲಿನ ಪ್ರದೇಶವನ್ನು ದಿನಕ್ಕೆ ಎರಡು ಬಾರಿ ಸ್ವಚ್ಛಗೊಳಿಸಲು ಆರಂಭಿಸಲಾಯಿತು ಮತ್ತು ತ್ಯಾಜ್ಯವನ್ನು ಪ್ರತ್ಯೇಕಿಸಲಾಗುತ್ತಿತ್ತು.
ಮರುಬಳಕೆ ಮಾಡಬಹುದಾದ ಕಸವನ್ನು ಸಂಗ್ರಹಿಸಿ, ಸ್ಕ್ರ್ಯಾಪ್ ವಿತರಕರಿಗೆ ಹಸ್ತಾಂತರಿಸಲಾಯಿತು ಮತ್ತು ಮರುಬಳಕೆ ಮಾಡಲಾಯಿತು.
ತ್ಸೋಮ್ಗೊ ಅನ್ನು ರಕ್ಷಿಸುವಲ್ಲಿ ಟಿಪಿಎಸ್‌ಎಸ್-ನ ಪ್ರಯತ್ನಗಳಿಗೆ ಸಿಕ್ಕಿಂ ಸರ್ಕಾರದಿಂದ ಹಲವಾರು ಪ್ರಶಸ್ತಿಗಳು ಸಂದಿವೆ.
ಒಂದು ಒಳ್ಳೆಯ ಕಾರಣಕ್ಕಾಗಿ ಸಮುದಾಯವು ಒಗ್ಗೂಡುವುದು ಎಂತಹ ಅದ್ಭುತ ಉದಾಹರಣೆ!
ಇಂದು, ವಾರ್ಷಿಕವಾಗಿ ನಾಲ್ಕು ಲಕ್ಷಕ್ಕೂ ಹೆಚ್ಚು ಪ್ರವಾಸಿಗರ ಭೇಟಿಯ ಹೊರತಾಗಿಯೂ, ಸಿಕ್ಕಿಂ ಭಾರತದ ಸ್ವಚ್ಛ ರಾಜ್ಯಗಳಲ್ಲಿ ಒಂದಾಗಿದೆ.
ಈ ಮೈಲಿಗಲ್ಲನ್ನು ಸಾಧಿಸುವಲ್ಲಿ ಸಂಗೆ ಅವರ ಕೊಡುಗೆಯನ್ನು ಭಾರತದ ಪ್ರಧಾನಮಂತ್ರಿ ಶ್ಲಾಘಿಸಿದ್ದಾರೆ.
ಸಂಗೆ ಶೆರ್ಪಾ ಜೀ ಅವರ ಪ್ರಯತ್ನಗಳು ಸಿಕ್ಕಿಂನಲ್ಲಿ ಸಾಂಸ್ಕೃತಿಕ ಹೆಗ್ಗುರುತಾಗಿರುವ ತ್ಸೋಮ್ಗೊವನ್ನು ಪರಿವರ್ತಿಸಿವೆ!
ಪರಿಸರ ಸಂರಕ್ಷಣೆಯ ಪ್ರಾಮುಖ್ಯತೆಯ ಬಗ್ಗೆ ಸಂಗೆಯವರು ಪ್ರವಾಸಿಗರು ಮತ್ತು ಸ್ಥಳೀಯರಿಗೆ ಸಮಾನವಾಗಿ ಪ್ರೇರೇಪಿಸಿ, ಜಾಗೃತಿ ಮೂಡಿಸುತ್ತಾ ಬಂದಿದ್ದಾರೆ.

# ಚಿಟೆ ಲುಯಿ ಉಳಿಸಿ




*ಮಿಜೋರಾಂ ರಾಜಧಾನಿ

^ಮಿಜೋರಾಂಗೆ ಸೇರಿದ ಜನರು






*ಕೆಸರು ಜಲಮೂಲಕ್ಕೆ ಸೇರದಂತೆ ಹಿಡಿದಿಟ್ಟುಕೊಳ್ಳಲು ಮತ್ತು ತಡೆಯಲು ನಿರ್ಮಿಸಲಾಗುವ ಸಣ್ಣ ಅಣೆಕಟ್ಟುಗಳು

^ರಾಷ್ಟ್ರೀಯ ಸೇವಾ ಯೋಜನೆ

# ಸುರೇಶ್ ಕುಮಾರ್


ಸರ್, ನಾವು ಬದಲಾವಣೆಯಾಗಬೇಕು ಎಂಬ ಬಗ್ಗೆ ಮಾತನಾಡುತ್ತೇವೆ, ಆದರೆ ನಾವು ಅದಕ್ಕಾಗಿ ಏನು ಮಾಡುತ್ತಿದ್ದೇವೆ? ಮಾಡಬೇಕಾದ ಕೆಲಸಗಳು ಹಲವಾರು ಇವೆ.
ಚರಣ್, ನಿನ್ನಿಚ್ಛೆಯ ಕೆಲಸದೊಂದಿಗೆ ಪ್ರಾರಂಭಿಸಿ, ಮುಂದುವರಿಸು.
ಇಂದಿನ ಕಥೆಯ ಹೀರೋ ಸುರೇಶ್ ಕುಮಾರ್ ರವರು ಮಾಡಿದ್ದು ಇದೇ ಕೆಲಸ. ಹಲವಾರು ವರ್ಷಗಳಿಂದ ತಾಳ್ಮೆಯಿಂದ ಕೆಲಸ ಮಾಡಿ ತನ್ನ ಪಟ್ಟಣವನ್ನು ಹಸಿರು ಮತ್ತು ಸುಂದರವಾಗಿಸಿದ್ದಾರೆ.
ಬೆಂಗಳೂರಿನ ಸಹಕಾರ ನಗರದ ನಿವಾಸಿ ಸುರೇಶ್ ಕುಮಾರ್ ಅವರು 'ನೀವು ಬಯಸುವ ಜಗತ್ತನ್ನು ನೋಡಲು, ಮೊದಲು ನೀವು ಬದಲಾಗಬೇಕು' ಎಂಬ ತತ್ವವನ್ನು ಹಲವು ವರ್ಷಗಳಿಂದ ಸಾಕಾರಗೊಳಿಸುತ್ತಿದ್ದಾರೆ.
ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಸುರೇಶ್ ರವರು ಸಹಕಾರ ನಗರದಲ್ಲಿ 2,500 ಸಸಿಗಳನ್ನು ನೆಟ್ಟಿದ್ದರು. ಇವುಗಳು ಈಗ ಸಂಪೂರ್ಣವಾಗಿ ಬೆಳೆದ ಮರಗಳಾಗಿದ್ದು, ಪ್ರತಿಯೊಂದಕ್ಕೂ ಸಾಂಸ್ಕೃತಿಕ ಪ್ರಾಮುಖ್ಯತೆಯ ವ್ಯಕ್ತಿಯ ಹೆಸರನ್ನು ಇಡಲಾಗಿದೆ.
ಸಸಿಗಳನ್ನು ನೆಡುವ ನಿರ್ಧಾರವು ಯಾವುದೋ ಒಂದು ಪ್ರಮುಖವಾದದನ್ನು ನೋಡಿದ್ದರಿಂದ ಹುಟ್ಟಿಕೊಂಡಿದೆ.


'ಭಾರತದ ಉದ್ಯಾನ ನಗರಿ' ಎಂದು ಪ್ರಖ್ಯಾತಿ ಪಡೆದಿರುವ ಬೆಂಗಳೂರು ಒಂದು ಕಾಲದಲ್ಲಿ ತನ್ನ ಸಸ್ಯವರ್ಗ, ವಿಸ್ತಾರವಾದ ಉದ್ಯಾನಗಳು ಮತ್ತು ಸರೋವರಗಳಿಗೆ ಹೆಸರುವಾಸಿಯಾಗಿತ್ತು.
1973
1992
2008
2021
ಆದರೆ ದುಃಖಕರ ವಿಷಯವೆಂದರೆ, ಕಳೆದ 50 ವರ್ಷಗಳಲ್ಲಿ, ನಗರವು ತನ್ನ ಹಸಿರು ಹೊದಿಕೆಯ ಶೇ. 88 ರಷ್ಟನ್ನು ಮತ್ತು ನೀರಿನ ಹೊದಿಕೆಯ ಶೇ. 79 ರಷ್ಟನ್ನು ತೀವ್ರ ನಗರೀಕರಣದಿಂದ ಕಳೆದುಕೊಂಡಿದೆ.
ಈ ಕ್ಷಿಪ್ರ ಅವನತಿಯು ತುಂಬಾ ಆಘಾತಕಾರಿಯಾಗಿದೆ. ನಾವು ಶೀಘ್ರದಲ್ಲೇ ಏನಾದರೂ ಮಾಡದಿದ್ದರೆ, ಸಸ್ಯವರ್ಗವು ಶಾಶ್ವತವಾಗಿ ನಶಿಸಿಹೋಗುತ್ತದೆ.
ಸುರೇಶ್ ರವರು ಮುಖ್ಯರಸ್ತೆಗಳಲ್ಲಿ, ರೈಲ್ವೆ ಹಳಿಗಳ ಉದ್ದಕ್ಕೂ ಮತ್ತು ಸಹಕಾರ ನಗರದ ಉದ್ಯಾನವನಗಳಲ್ಲಿ ಸಸಿಗಳನ್ನು ನೆಡಲು ಪ್ರಾರಂಭಿಸಿದರು.
ನಾವು ಹೆಚ್ಚು ಮರಗಳನ್ನು ನೆಟ್ಟಷ್ಟೂ ನಮ್ಮ ಭವಿಷ್ಯವು ಹಸಿರಾಗಿರುತ್ತದೆ!
ಇದೇ ರೀತಿ ಮಾಡುವಂತೆ ಅವರು ಪ್ರದೇಶದ ನಿವಾಸಿಗಳನ್ನು ಸಹ ಪ್ರೋತ್ಸಾಹಿಸಿದರು.
ಆರಂಭದಲ್ಲಿ, ಇವರ ಒಳ್ಳೆಯ ಉದ್ದೇಶಕ್ಕೆ ಸಮಸ್ಯೆಗಳು ಎದುರಾಗಿದ್ದವು.
ನಾವು ನಿಮ್ಮನ್ನು ನಂಬುವುದಿಲ್ಲ. ನೀವು ರಾಜಕೀಯ ಸೇರುವ ಉದ್ದೇಶದಿಂದ ಹೀಗೆ ಮಾಡುತ್ತಿದ್ದೀರೋ ಹೇಗೆ?
ರಾಜಕೀಯ ನನಗೆ ಇಷ್ಟವಿಲ್ಲ ಸರ್. ಪ್ರಕೃತಿ ನಮಗೆ ಬಹಳಷ್ಟು ನೀಡಿದೆ, ಆದ್ದರಿಂದ ಪರಿಸರವನ್ನು ರಕ್ಷಿಸುವುದು ಮತ್ತು ಸಂರಕ್ಷಿಸುವುದು ನನ್ನ ಕರ್ತವ್ಯ.
ಬೇಸಿಗೆಯಲ್ಲಿ ಗಿಡಗಳಿಗೆ ನೀರುಣಿಸುವುದು ಕಷ್ಟದ ಕೆಲಸವಾಗಿತ್ತು. ಆದರೆ -
ನನಗೆ ಗೊತ್ತು! ನಾನು ನೀರಿನ ತೊಟ್ಟಿಗಳನ್ನು ನಿರ್ಮಿಸುತ್ತೇನೆ ಮತ್ತು ಗಿಡಗಳಿಗೆ ನೀರು ಹಾರೈಕಲು ಕೆಲಸದವರನ್ನು ನೇಮಿಸುತ್ತೇನೆ.
ಹೀಗೆ ಮಾಡಿದ್ದಲ್ಲದೆ, ಜೊತೆಗೆ ಸುರೇಶ್ ಪ್ರತಿದಿನ ಸಸಿಗಳ ಬೆಳವಣಿಗೆಯನ್ನು ಖುದ್ದಾಗಿ ನೋಡಿಕೊಳ್ಳುತ್ತಿದ್ದರು.




ಸುರೇಶ್ ಅವರ ಪ್ರಯತ್ನದಿಂದಾಗಿ, ಇಂದು ಈ ಪ್ರದೇಶದಲ್ಲಿ ಅನೇಕ ಮರಗಳ ಜೊತೆಗೆ ಮಹಾಗನಿ, ಬೇವು, ಮರ ಮಲ್ಲಿಗೆ ಮತ್ತು ಜಕರಂದದಂತಹ ಮರಗಳ ಸಂಪತ್ತು ಇದೆ.
ಇಲ್ಲಿಯ ಗಾಳಿಯು ಸಹ ಸ್ವಚ್ಛ ಮತ್ತು ತಾಜಾತನದಿಂದ ಕೂಡಿದ್ದು, ಈ ಪ್ರದೇಶವು ನಗರದಲ್ಲಿ ಹೆಚ್ಚು ಬೇಡಿಕೆಯಿರುವ ವಸತಿ ಸ್ಥಳಗಳಲ್ಲಿ ಒಂದಾಗಿದೆ
ಸುರೇಶ್ ಅವರು ಕರ್ನಾಟಕದ ಭಾಷೆ, ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರಚಾರ ಮಾಡುವ ಕೆಲಸವನ್ನು ಸಹ ಮಾಡಿದ್ದಾರೆ.
ಇದಕ್ಕಾಗಿ ಅವರು 500 ಚದರ ಅಡಿ ಬಸ್ ಶೆಲ್ಟರ್ ಅನ್ನು ನಿರ್ಮಿಸಿದ್ದು, ಇದರಲ್ಲಿ ರಾಜ್ಯದ ಕವಿಗಳು ಮತ್ತು ಇತರ ಪ್ರಸಿದ್ಧ ವ್ಯಕ್ತಿಗಳ ಚಿತ್ರಗಳಿವೆ.
ಈ ಬಸ್ ನಿಲ್ದಾಣದಲ್ಲಿ ಕನ್ನಡ ಭಕ್ತಿಗೀತೆಗಳು, ಜಾನಪದ ಗೀತೆಗಳು, ಚಲನಚಿತ್ರ ಗೀತೆಗಳು ಮತ್ತು ಶಾಸ್ತ್ರೀಯ ಸಂಗೀತ- ಎಲ್ಲವನ್ನೂ ಸಹ ಪ್ಲೇ ಮಾಡಲಾಗುತ್ತದೆ.
ಜನರಿಗೆ ಶಿಕ್ಷಣ ನೀಡುವ ಅದ್ಭುತವಾದ ಸೃಜನಶೀಲ ವಿಧಾನ!
ಕೆಲವು ಟ್ರ್ಯಾಕ್‌ಗಳು ಕರ್ನಾಟಕದ ಶ್ರೀಮಂತ ಇತಿಹಾಸದ ಬಗ್ಗೆ ವಿಶೇಷವಾಗಿ ರೆಕಾರ್ಡ್ ಮಾಡಲಾದ ಮಾಹಿತಿ ಹೊಂದಿವೆ.
ಇಷ್ಟೆಲ್ಲ ಹೊಗಳಿಕೆಯ ನಡುವೆಯೂ ಸುರೇಶ್ ಸರಳವಾದ ಆದರ್ಶಗಳೊಂದಿಗೆ ಸರಳ ವ್ಯಕ್ತಿಯಾಗಿ ಉಳಿದಿದ್ದಾರೆ.
ನಾನು ಮರಗಳನ್ನು ನೆಡುವುದನ್ನು ಮತ್ತು ನಮ್ಮ ಪರಿಸರ ಹಾಗೂ ಸಂಸ್ಕೃತಿಯನ್ನು ರಕ್ಷಿಸುವುದನ್ನು ಮುಂದುವರಿಸುತ್ತೇನೆ- ಏಕೆಂದರೆ ನಾನು ಮಾಡಬಹುದು ಮತ್ತು ನಾನು ಮಾಡಬೇಕು.

# ತುಳಸಿ ರಾಮ್ ಯಾದವ್




*ಗ್ರಾಮದ ಮುಖ್ಯಸ್ಥ


ಗ್ರಾಮಸ್ಥರಿಗೆ ತುಳಸಿ ರಾಮ್ ರವರ ಪ್ಲಾನ್ ಬಗ್ಗೆ ಕುತೂಹಲವಿತ್ತು ಆದರೆ ಹೇಗೆ ಮುಂದುವರಿಯುವುದು ಎಂದು ತಿಳಿಯಲಿಲ್ಲ.
ಅಪ್ಪಾ, ತುಳಸಿ ರಾಮ್ ಜೀ ರವರ 'ಹಳ್ಳಿಯ ನೀರು ಹಳ್ಳಿಯಲ್ಲಿ ಉಳಿಯುತ್ತದೆ' ಎಂದರೆ ಅರ್ಥವೇನು?
ಅಂದರೆ, ನಮ್ಮ ಹಳ್ಳಿಯಲ್ಲಿರುವ ನೀರನ್ನು ಕುಡಿಯಲು ಮತ್ತು ಇತರ ಗೃಹಬಳಕೆಗೆ ಇಟ್ಟುಕೊಳ್ಳಬೇಕು, ವ್ಯರ್ಥ ಮಾಡಬಾರದು ಅಥವಾ ಬೇರೆಡೆ ಬಳಸಬಾರದು ಎಂದರ್ಥ.
ಆದ್ದರಿಂದ, ನಮ್ಮಲ್ಲಿ ಪ್ರತಿಯೊಬ್ಬರೂ ನೀರನ್ನು ಉಳಿಸಲು ಸಹಾಯ ಮಾಡಬಹುದೇ?
ಹೌದು, ನೀರಿನ ಪ್ರತಿ ಹನಿಯೂ ಮುಖ್ಯವೆಂಬುದನ್ನು ನಾವು ಅರ್ಥಮಾಡಿಕೊಂಡಾಗ, ನೀರಿನ ನಮ್ಮೆಲ್ಲಾ ಸಮಸ್ಯೆಗಳನ್ನು ನಾವು ಪರಿಹರಿಸಬಹುದು.
ಮಳೆನೀರನ್ನು ಉಳಿಸುವ ಮೂಲಕ ಕೃಷಿ ಆರಂಭಿಸುವಂತೆ ತುಳಸಿರಾಮ್ ರೈತರಿಗೆ ಸಲಹೆ ನೀಡಿದರು.
ನಮ್ಮ ಹೊಲಗಳಲ್ಲಿ ಬಾವಿಗಳನ್ನು ತೋಡಿ ಕಾಲುವೆಗಳಿಗೆ ಸಂಪರ್ಕಿಸೋಣ. ಕೃಷಿ ಬಳಕೆಗಾಗಿ ನಾವು ಮಳೆನೀರನ್ನು ಸಂಗ್ರಹಿಸೋಣ.
ಹೀಗೆ ಮಾಡಿದರೆ ಆ ನೀರಿನಿಂದ ವರ್ಷವಿಡೀ ಬೆಳೆಗಳನ್ನು ಬೆಳೆಯಲು ನಮಗೆ ಸಹಾಯವಾಗುತ್ತದೆ. ನಾವು ಈ ಕೆಲಸವನ್ನು ಒಮ್ಮೆಲೇ ಮಾಡಬೇಕು.
ರೈತರು 40 ಕ್ಕೂ ಹೆಚ್ಚು ಬಾವಿಗಳನ್ನು ತೋಡಿ ಕಾಲುವೆಗಳೊಂದಿಗೆ ಸಂಪರ್ಕಿಸಿದರು.
ವರ್ಷಗಳು ಕಳೆದಂತೆ -
ಒಂದು ಕಾಲದಲ್ಲಿ ಬತ್ತಿ ಹೋಗಿದ್ದ ಬಾವಿಗಳು ಈಗ ನೀರಿನಿಂದ ತುಂಬಿ ನಮಗೆ ಸಮೃದ್ಧಿಯನ್ನು ತಂದಿವೆ.
ಹೌದು, ತುಳಸಿ ರಾಮ್ ಜಿ ಹೇಳಿದ್ದು ಸರಿ ಇದೆ. ಲುಖ್ತಾರಾ ಈಗ ಮಾದರಿ ಗ್ರಾಮವಾಗಿದೆ.
ಪ್ರಧಾನಿ ಮೋದಿಯವರು ತಮ್ಮ ರೇಡಿಯೋ ಕಾರ್ಯಕ್ರಮ ಮನ್ ಕಿ ಬಾತ್ ನಲ್ಲಿ ನೀರನ್ನು ಸಂರಕ್ಷಿಸುವ ಪ್ರಯತ್ನಗಳಿಗಾಗಿ ತುಳಸಿ ರಾಮ್ ಯಾದವ್ ಅವರನ್ನು ಶ್ಲಾಘಿಸಿದ ನಂತರ-
ತುಳಸಿ ರಾಮ್ ಜೀ, ನೀವು ನೀರು ಉಳಿಸಿದ ವೀರ! ಈಗ ನಮ್ಮ ಹಳ್ಳಿ ಜಗತ್ತಿಗೇ ಪರಿಚಯವಾಯಿತು
ನಾವು ಒಟ್ಟಿಗೆ ಕೆಲಸ ಮಾಡಿ ಬದಲಾವಣೆಯನ್ನು ತಂದೆವು.



मन की बात 100

MANN KI BAAT 100


# ಮನ್ ಕಿ ಬಾತ್

## ಸಂಪುಟ 8

"ಜಗತ್ತು ಮನುಷ್ಯನ ಅಗತ್ಯಕ್ಕೆ ಸಾಕಾಗುವಷ್ಟನ್ನು ಹೊಂದಿದೆ ಆದರೆ ಅವನ ದುರಾಸೆಗೆ ಸಾಕಾಗುವಷ್ಟನ್ನು ಹೊಂದಿಲ್ಲ." ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹೇಳಿದ ಈ ಮಾತುಗಳು ಓಡುತ್ತಿರುವ ಈ ಜಗತ್ತಿನಲ್ಲಿ ಆಗಾಗ ಮರೆತುಹೋಗುತ್ತಿವೆ. ಉದ್ಯಮಗಳು ಮತ್ತು ಕೈಗಾರಿಕೆಗಳ ಬೆಳವಣಿಗೆಯಿಂದ, ಟನ್‌ಗಳಷ್ಟು ತ್ಯಾಜ್ಯವನ್ನು ಉತ್ಪಾದಿಸಲಾಗುತ್ತಿದ್ದು, ಈ ಪ್ರಕ್ರಿಯೆಯಿಂದಾಗಿ ಪರಿಸರಕ್ಕೆ ಸರಿಪಡಿಸಲಾಗದಷ್ಟು ಹಾನಿ ಉಂಟಾಗುತ್ತಿದೆ. ಆದರೆ, ಈ ರೀತಿಯನ್ನು ಹಾನಿಯನ್ನು ತಡೆಗಟ್ಟಲು ಬೇಕಾಗಿರುವುದು, ಕೆಲವು ಜವಾಬ್ದಾರಿಯುತ ನಾಗರಿಕರು ಮಾತ್ರ.

ದೇಶದಾದ್ಯಂತದ ಜನರು ತಮ್ಮ ಸುತ್ತಮುತ್ತಲಿನ ಸಮಸ್ಯೆಯನ್ನು ನೋಡಿ, ಅದನ್ನು ಸರಿಪಡಿಸಲು ಸ್ವತಃ ಕಾರ್ಯಪ್ರವೃತ್ತರಾದವರ ಬಗ್ಗೆ ಮನ್ ಕಿ ಬಾತ್‌ನ ಎಂಟನೇ ಸಂಪುಟವು ತಿಳಿಸುತ್ತದೆ.

ಅಳಿವಿನಂಚಿನಲ್ಲಿರುವ ಗುಬ್ಬಚ್ಚಿಗಳಿಗೆ ಮನೆ ಕಟ್ಟಿದ ಇಂದರ್‌ಪಾಲ್ ಸಿಂಗ್ ಬಾತ್ರಾ ಅವರಿಂದ ಹಿಡಿದು, ತಮಿಳುನಾಡಿನ ನಾಗಾನದಿಯನ್ನು ಪುನರುಜ್ಜೀವನಗೊಳಿಸಿದ ಮಹಿಳೆಯರವರೆಗಿನ ಈ ಹನ್ನೊಂದು ಕಥೆಗಳು ಪರಿಸರವನ್ನು ಸಂರಕ್ಷಿಸಿದ ವೀರರ ಕುರಿತಾಗಿವೆ. ಇವರೆಲ್ಲರೂ ಇಟ್ಟ ಸರಿಯಾದ ಹೆಜ್ಜೆಯಿಂದ ಪ್ರೇರಣೆಗೊಳಗಾಗಿ ಅನೇಕರು ಇವರೊಂದಿಗೆ ಕೈಜೋಡಿಸಿ, ಇಂತಹ ಕೆಲಸಗಳನ್ನು ಮುಂದುವರಿಸಿದ್ದಾರೆ.



₹99

www.amarchitrakatha.com
ISBN 978-93-6127-287-5
9 789361 272875